**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಂತಾಮಣಿ**

**ಸಿ.ಸಿ.ನಂ : 1123/2021**

ಫಿರ್ಯಾದುದಾರರು: ಸರ್ಕಾರ ಪರವಾಗಿ: ಚಿಂತಾಮಣಿ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು:

**1.** ಶ್ರೀ ಮಂಜುನಾಥ ರೆಡ್ಡಿ ಕೆ. ಬಿನ್ ನಾಗರಾಜ್ ರೆಡ್ಡಿ
**29** ವರ್ಷ, ವಾಸ: ಪಿ.ಟಿ.ಎಂ. ಗ್ರಾಮ ಮತ್ತು ಮಂಡಲಂ
ಚಿತ್ತೂರು, ಆಂದ್ರ ಪ್ರದೇಶ

**2.** ಶ್ರೀ ಕಲ್ಲೇಗಾರಿ ನಾಗರಾಜರೆಡ್ಡಿ ಬಿನ್ ದಾಸಣ್ಣ
**58** ವರ್ಷ, ವಾಸ: ಪಿ.ಟಿ.ಎಂ. ಗ್ರಾಮ ಮತ್ತು ಮಂಡಲಂ
ಚಿತ್ತೂರು, ಆಂದ್ರ ಪ್ರದೇಶ

**3.** ಶ್ರೀಮತಿ ರಾಧ ಕೆ. ಕೋಂ ನಾಗರಾಜ್ ರೆಡ್ಡಿ
**47** ವರ್ಷ, ವಾಸ: ಪಿ.ಟಿ.ಎಂ. ಗ್ರಾಮ ಮತ್ತು ಮಂಡಲಂ
ಚಿತ್ತೂರು, ಆಂದ್ರ ಪ್ರದೇಶ

## ದೋಷಾರೋಪಣೆ

ಶ್ರೀಮತಿ ಶ್ರೀಶೈಲಜಾ ಹೆಚ್ ವಿ, ಎಂ.ಎ., ಎಲ್.ಎಲ್.ಎಂ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚಿಂತಾಮಣಿ, ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆರೋಪ ಹೊರಿಸುವುದೇನೆಂದರೆ,

ಮೊದಲನೆಯದಾಗಿ 1 ನೇ ಆರೋಪಿಯಾದ ನೀವು ಚಾಸಾ-1 ಪ್ರವಲ್ಲಿಕಾ ರವರನ್ನು ದಿನಾಂಕ 16/06/2019 ರಂದು ಚಿಂತಾಮಣಿ ನಗರದ ಕೆ.ಎಂ.ಡಿ. ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದು, ಮದುವೆಯಾದ ಮೂರು ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು, ನಂತರ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನಿಮ್ಮ ತವರು ಮನೆಯಿಂದ ಇನ್ನು ಹೆಚ್ಚಿಗೆ ವರದಕ್ಷಿಣೆ ಹಣವನ್ನು ತರುವಂತೆ ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರಗೆ ಹಾಕಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ, ಆ ಮೂಲಕ ನೀವುಗಳು ಭಾರತ ದಂಡ ಸಂಹಿತೆ ಕಲಂ 498(ಎ) ಸಹ ಕಲಂ 34 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೆಯದಾಗಿ ದಿನಾಂಕ 28/02/2020 ರಂದು ಬೆಳಿಗ್ಗೆ ಚಿಂತಾಮಣಿ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಂತಾಮಣಿ ನಗರದ ಸೋನಶೆಟ್ಟಿಹಳ್ಳಿಯಲ್ಲಿರುವ ಚಾಸಾ-2

ವೆಂಕಟಚಲಪತಿ ರವರ ಮನೆಗೆ 1 ರಿಂದ 3 ನೇ ಆರೋಪಿತರಾದ ನಿಮ್ಮನ್ನು ಕರೆಯಿಸಿ ಚಾಸಾ-1 ರಿಂದ 6 ರವರ ಸಮಕ್ಷಮ ಚಾಸಾ-2 ರವರು ಈಗ ಸದ್ಯಕ್ಕೆ ತನ್ನ ಬಳಿ ಹಣ ಇಲ್ಲವೆಂದು ತಿಳಿಸಿದಾಗ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರಿಂದ 3 ರವರ ಜೊತೆ ಜಗಳ ತೆಗೆದು ಬಾಕಿ ವರದಕ್ಷಿಣೆ ಹಣ 10 ಲಕ್ಷ ರೂ. ಕೊಡುವವರೆಗೆ ಚಾಸಾ-1 ರವರನ್ನು ನಮ್ಮ ಮನೆಗೆ ವಾಪಸ್ಸು ಕರೆದುಕೊಂಡು ಹೋಗುವುದಿಲ್ಲವೆಂದು ಚಾಸಾ-1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಶಾಂತಿ ಭಂಗವನ್ನುಂಟು ಮಾಡಿ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ 504 ಸಹ ಕಲಂ 34 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ಮೂರನೆಯದಾಗಿ, ಆರೋಪಿತರಾದ ನೀವುಗಳು ಮದುವೆ ಸಮಯದಲ್ಲಿ ಚಾಸಾ-1 ರವರ ತವರು ಮನೆಯಿಂದ ವರದಕ್ಷಿಣೆಯಾಗಿ ಚಾಸಾ-1 ರವರಿಗೆ 55 ಗ್ರಾಂ ತೂಕದ ಹಾರ, 120 ಗ್ರಾಂನ 3 ಸೆಟ್ ಬಳೆಗಳು, 90 ಗ್ರಾಂನ ಕಾಸಿನ ಸರ, 80 ಗ್ರಾಂನ ಹಸಿರು ಕಲ್ಲಿನ ಹಾರ, 40 ಗ್ರಾಂನ ಮಿನಿ ಎಲೆಗಳ ಹಾರ, 35 ಗ್ರಾಂನ ಸ್ಟೋನ್ ಮಿನಿ ಹಾರ, 4 ಕೆಜಿ ಬೆಳ್ಳಿ ವಸ್ತುಗಳನ್ನು ಹಾಗೂ 3 ಲಕ್ಷ ರೂ. ಬೆಲೆ ಬಾಳುವ ರೇಷ್ಮೆ ಸೀರೆಗಳನ್ನು ಹಾಗೂ 1 ನೇ ಆರೋಪಿಯಾದ ನಿಮಗೆ ವರದಕ್ಷಿಣೆಯಾಗಿ 40 ಗ್ರಾಂನ ಕತ್ತಿನ ಚೈನ್, 35 ಗ್ರಾಂನ ಬ್ರಾಸ್‌ಲೈಟ್, 20 ಮತ್ತು 16 ಗ್ರಾಂವುಳ್ಳ 2 ಉಂಗುರ, 2 ಲಕ್ಷ ರೂ. ಬೆಲೆ ಬಾಳುವ ಬಟ್ಟೆಗಳನ್ನು ಮತ್ತು 10 ಲಕ್ಷ ನಗದು ಹಣವನ್ನು ಪಡೆದುಕೊಂಡಿರುತ್ತೀರಿ, ಆ ಮೂಲಕ ನೀವು ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಆರೋಪಿತರಾದ ನೀವುಗಳು ಮದುವೆಯ ಸಮಯದಲ್ಲಿ ವರದಕ್ಷಿಣೆಯನ್ನು ಪಡೆದುಕೊಂಡಿದ್ದರೂ ಮದುವೆಯಾದ ನಂತರ ಬಾಕಿ ವರದಕ್ಷಿಣೆ ಹಣ 10 ಲಕ್ಷ ರೂ. ತರುವಂತೆ ಚಾಸಾ-1 ರವರಿಗೆ ಕಿರುಕುಳ ನೀಡಿದ್ದು, ಆ ಮೂಲಕ ನೀವು ವರದಕ್ಷಿಣೆ ನಿಷೇಧ ಕಾಯಿದೆ ಕಲಂ 4 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು ಆಪಾದನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾದನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿವೆ.)

ದಿನಾಂಕಃ **20/12/2022**

ಸಹಿ/-
( ಶ್ರೀ ಶೈಲಜಾ ಹೆಚ್. ವಿ )
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ ನ್ಯಾಯಾಲಯ.
ಚಿಂತಾಮಣಿ